ಸದನವು ಬೆಳಿಗ್ಗೆ 10 ಗಂಟೆ 36 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರಾದ ಶ್ರೀ ಕಾಗೋಡು ತಿಮ್ಮಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

ಅಧ್ಯಕ್ಷರು:– ಮಾನ್ಯ ಸಹಕಾರ ಸಚಿವರು function ಇರುವ ಕಾರಣದಿಂದ ಆಮೇಲೆ ಬರುತ್ತೇವೆಂದು ಹೇಳಿರುತ್ತಾರೆ. ಈಗ ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭ ಮಾಡೋಣ.

ಶ್ರೀ ಕೆ.ಜಿ. ಬೋಪಯ್ಯ:– ಮಾನ್ಯ ಅಧ್ಯಕ್ಷರೆ, ನಿಯಮ 69 ರಡಿಯಲ್ಲಿ ಒಂದು ವಿಷಯ ಚರ್ಚೆ ಮಾಡುವುದಿದೆ.

ಅಧ್ಯಕ್ಷರು:– ಮಾಹಿತಿ ಬರುತ್ತದೆ. ಆಮೇಲೆ ಚರ್ಚೆ ಮಾಡೋಣ.

1. ವಿತ್ತೀಯ ಕಾರ್ಯಕಲಾಪಗಳು

2015–16ನೇ ಸಾಲಿನ ಬೇಡಿಕೆ ಸಂಖ್ಯೆ–20, ಲೋಕೋಪಯೋಗಿ ಇಲಾಖೆಯ ಮೇಲೆ ಚರ್ಚೆ.

ಶ್ರೀ ವಿ. ಸುನಿಲ್ ಕುಮಾರ್ (ಕಾರ್ಕಳ):– ಮಾನ್ಯ ಅಧ್ಯಕ್ಷರೆ, ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಮೇಲೆ ಚರ್ಚೆಯನ್ನು ಮಾಡುವುದಕ್ಕೆ ಅವಕಾಶವನ್ನು ಮಾಡಿಕೊಟ್ಟಿರುವ ತಮಗೆ ಧನ್ಯವಾದಗಳನ್ನರ್ಪಿಸುತ್ತಾ, ಒಂದು ಸರ್ಕಾರದ ಅಳತೆಗೋಲು ನಿರ್ಮಾಣವಾಗುವಂತದ್ದು ಹಾಗೂ ಎಲ್ಲಾ ಇಲಾಖೆಗಳ ಜೊತೆಯಲ್ಲಿ ಪ್ರಮುಖವಾದಂತಹ ಇಲಾಖೆ ಲೋಕೋಪಯೋಗಿ ಇಲಾಖೆ ಎಂದು ನಾವೆಲ್ಲರೂ ಭಾವಿಸಿರುತ್ತೇವೆ. ಇವತ್ತಿನ ಜನಸಂಖ್ಯೆ ಮತ್ತು ಅಭಿವೃದ್ಧಿಯ ವೇಗಕ್ಕೆ ತಕ್ಕಂತೆ ಆಯಾ ರಾಜ್ಯದಲ್ಲಿ ದೊಡ್ಡ ಪ್ರಮಾಣದಲ್ಲಿ ಒಳ್ಳೆಯ ರಸ್ತೆಗಳು ನಿರ್ಮಾಣವಾಗಬೇಕು. ಆ ಒಳ್ಳೆಯ ರಸ್ತೆಗಳು ಸಂಚಾರದ ಮುಖಾಂತರ ಅಭಿವೃದ್ಧಿಯ ಚಟುವಟಿಕೆಗಳು ಎಲ್ಲ ದಿಕ್ಕಿನಿಂದಲೂ ನಡೆಯಬೇಕೆಂಬ ಅಭಿಲಾಷೆಯನ್ನು ಇಡೀ ರಾಜ್ಯದ ಜನತೆ ಹೊಂದಿದ್ದಾರೆ. ಸಾಕಷ್ಟು ಬಾರಿ ಹೊರರಾಜ್ಯಗಳಿಗೆ ಮತ್ತು ವಿದೇಶಗಳಿಗೆ ಹೋದಂತಹ ಸಂದರ್ಭದಲ್ಲಿ